


### ವಿಶ್ವಕಪ್‌ನ ಸಡಗರ
ವಿಶ್ವಕಪ್ ಗೆದ್ದ ಸಡಗರ, ಸಂಭ್ರಮದ ಚಿತ್ರಗಳು ಹಾಗೂ ಗೋಪಾಲಕೃಷ್ಣ ಹೆಗಡೆ ಮುಖಪುಟ ಲೇಖನ ಹೊತ್ತ ಏ.21ರ 'ಸುಧಾ' ಸಂಚಿಕೆ ಆಕರ್ಷಕವಾಗಿತ್ತು.

ಬಳ್ಳಾರಿ ಮಧ್ವರಾಜ್, ಕೋಟೇಶ್ವರ ಸೂರ್ಯನಾರಾಯಣ ರಾವ್, ಶ್ರೀನಾಥ ಕೊನೇಟಿ, ಬೆಂಗಳೂರು/ ಕೆ.ವಿ.ಶಿವಕುಮಾರ್, ಕಾಳೀಹುಂಡಿ/ ಅರುಣ ಬಿ.ಕುಲಕರ್ಣಿ, ನರೇಗಲ್ಲ

### ಒಳ್ಳೆಯದಾಯಿತು!
ಕ್ರಿಕೆಟ್ ವಿಶ್ವಕಪ್ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳಲ್ಲಿ ಸಚಿನ್ ತೆಂಡೂಲ್ಕರ್ ಸೆಂಚುರಿ ಬಾರಿಸದೆ ಇದ್ದುದು ಒಳ್ಳೆಯದಾಯಿತು. ಅವರು ಸೆಂಚುರಿ ಬಾರಿಸಿ ಇತರರು (ಕ್ರಿ) ಕೆಟ್ಟಾಟ ಆಡಿ ಸೋತಿದ್ದರೆ ಮೂಢನಂಬಿಕೆ ಇನ್ನಷ್ಟು ಗಾಢವಾಗುತ್ತಿತ್ತು.

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಸುರೆಯ ಪುತ್ರರು ಕ್ರಿ'ಕೆಟ್ಟಿ'ಗರು!
ಸೆರೆಯ ಬಾಟಲಿಗಳಿಂದ ತಲೆಗಳ ಮೇಲೆ ಸ್ನಾನ ಮಾಡುತ್ತಿರುವ ಗಾಂಧಿ ಭಾರತದ ಕ್ರಿ 'ಕೆಟ್ಟಿ'ಗರು! ಜೈ! ಸುರಾಮೃತ ಭಾರತ ಪುತ್ರರು!! ಅನ್ನೋಣವೆ?

-ಸರ್ವಜಿತ, ಹುಬ್ಬಳ್ಳಿ

### ಅಣ್ಣಾ ಹಜಾರೆ ಯಾಕಿಲ್ಲ?
'ಅಣ್ಣಾ ಹಜಾರೆ'ಯವರ ಮುಖಪುಟ ನಿರೀಕ್ಷಿಸಿದ್ದ ನನಗೆ 'ಚಾಂಪಿಯನ್ಸ್' ಮುಖಪುಟ ನೋಡಿ ಅಚ್ಚರಿಯಾಯಿತು!

-ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

### ಅನ್ನ ದಾತ!
ಶಿರಾಲಿಯ ನಾರಾಯಣ ಯಾಜಿಯವರು 'ನಿಮ್ಮ ಪುಟ' ವಿಭಾಗದಲ್ಲಿ ಬರೆದಿದ್ದ ಐದು ರೂಪಾಯಿಗೂ ಊಟ! ಓದಿ ಊಟ ಮಾಡಿದಷ್ಟೇ ಖುಷಿಯಾಯಿತು.

-ಪಿ.ಎನ್. ಶ್ರೀವತ್ಸ, ಬೆಂಗಳೂರು

### ಮಹಾವೀರ ಅಲ್ಲ, ಪಾರ್ಶ್ವನಾಥ
ನಿಮ್ಮ ಪುಟದ 'ಸ್ಮಾರಕ ಸಂಗ್ರಹಾಲಯ' ಎಂಬ ಪುಟ್ಟ ಬರಹದಲ್ಲಿ ಈರಣ್ಣ ಬೆಂಗಾಲಿ ಅವರು ರಾಯಚೂರಿನ ಕೋಟೆಯ ಪ್ರಾಚ್ಯ ವಸ್ತುಸಂಗ್ರಹಾಲಯದ ಬಗ್ಗೆ ಚಿಕ್ಕ ಚೊಕ್ಕ ಪರಿಚಯ ಮಾಡಿಕೊಟ್ಟಿದ್ದಾರೆ.

ಬರಹದ ಜೊತೆಗೆ ಕೊಟ್ಟಿರುವ ಚಿತ್ರಕ್ಕೆ ಮಹಾವೀರ ಮೂರ್ತಿ ಎಂದು ಬರೆದಿದ್ದಾರೆ. ಆದರೆ ಅದು ಮಹಾವೀರ ಮೂರ್ತಿಯಲ್ಲ, ಪಾರ್ಶ್ವನಾಥ ತೀರ್ಥಂಕರ ಮೂರ್ತಿ. ತಲೆಯ ಮೇಲಿರುವ ಏಳು ಹೆಡೆಯ ಸರ್ಪ, ಬಲಪಾರ್ಶ್ವದಲ್ಲಿ ಕೆಳಗೆ ಧರಣೇಂದ್ರ ಎಂಬ ಯಕ್ಷನ ಚಿಕ್ಕಗಾತ್ರದ ಶಿಲ್ಪ, ಎಡಪಾರ್ಶ್ವದಲ್ಲಿ ಪದ್ಮಾವತಿ ಯಕ್ಷಿಯ ಚಿಕ್ಕ ಶಿಲ್ಪ ಇರುವುದು– ತೀರ್ಥಂಕರ ಪಾರ್ಶ್ವನಾಥ ಎಂಬುದಕ್ಕೆ ಸ್ಪಷ್ಟ ಸಾಕ್ಷಿಗಳಾಗಿವೆ.

-ಡಾ. ಬಿ. ರಾಜಶೇಖರಪ್ಪ, ಚಿತ್ರದುರ್ಗ

### ಬೇಂದ್ರೆ ಗ್ರಂಥ ಬಹುಮಾನಕ್ಕೆ ಆಹ್ವಾನ
ಧಾರವಾಡದ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ 'ಬೇಂದ್ರೆ ಗ್ರಂಥ ಬಹುಮಾನ'ಕ್ಕೆ ಕಾವ್ಯ, ಕತೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಲಲಿತ ಪ್ರಬಂಧ, ವಿಮರ್ಶೆ ಹಾಗೂ ಅನುವಾದ– ಈ ಎಂಟು ಪ್ರಕಾರದ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.

2010ರಲ್ಲಿ ಪ್ರಕಟವಾದ, 1971 ಅಥವಾ ನಂತರದಲ್ಲಿ ಜನಿಸಿದ ಲೇಖಕ–ಲೇಖಕಿಯರು ಪುಸ್ತಕ ಬಹುಮಾನಕ್ಕೆ ಅರ್ಹರಿದ್ದು, ಪ್ರತಿ ಶೀರ್ಷಿಕೆಯ ಮೂರು ಪ್ರತಿಗಳನ್ನು ಮೇ 31ರ ಒಳಗಾಗಿ 'ಅಧ್ಯಕ್ಷರು, ಬೇಂದ್ರೆ ಗ್ರಂಥ ಬಹುಮಾನ ಸಮಿತಿ, ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಬೇಂದ್ರೆ ಭವನ, ಸಾಧನಕೇರಿ, ಧಾರವಾಡ–580008' (ಫೋನ್: 0836–2435327). ಈ ವಿಳಾಸಕ್ಕೆ ಕಳಿಸಬೇಕು ಎಂದು ಅಧ್ಯಕ್ಷ ಶ್ಯಾಮಸುಂದರ ಬಿದರಕುಂದಿ ಅವರು ತಿಳಿಸಿದ್ದಾರೆ.

ಯುಸಿಮಾಸ್ – ಅಬಾಕಸ್ ಶಿಕ್ಷಣದ ಪ್ರವರ್ತಕ ಮತ್ತು ನೇತಾರ – 1999 ರಿಂದ
UCMAS
Mental Arithmetic-India
4 ರಿಂದ 13 ವರ್ಷದ ಮಕ್ಕಳಿಗಾಗಿ
ಯುಸಿಮಾಸ್ ಅಬಾಕಸ್ ಮತ್ತು ಮೆಂಟಲ್ ಅರ್ತಮೆಟಿಕ್
ಮೆದುಳಿನ ಸಂಪೂರ್ಣ ವಿಕಾಸ ಕಾರ್ಯಕ್ರಮ
ಗಣಕೀಕೃತ ಅಬಾಕಸ್ ಕ್ರೀಡೆಗಳು
ನಿಮ್ಮ ಮಕ್ಕಳನ್ನು ಹತ್ತಿರದ ಯುಸಿಮಾಸ್ ಕೇಂದ್ರಕ್ಕೆ ನೋಂದಾಯಿಸಿ ಮತ್ತು ಭವಿಷ್ಯದ ಮೇಧಾವಿಗಳನ್ನು ನಿರ್ಮಿಸಿರಿ
FREE CD




Exciting Special Offer
Abacus Program for Schools
On Student Fee, Centre Registration Fee & Training Fee
ಕಾರ್ಯಕ್ರಮವು ಅಂಕಗಣಿತದ ಸಾಮರ್ಥ್ಯ ಮತ್ತು
- ನೆನಪಿನ ಶಕ್ತಿ। ಶ್ರವಣ ಕೌಶಲ,
- ಏಕಾಗ್ರತೆ । ಕಲ್ಪನಾ ಶಕ್ತಿ
- ಆತ್ಮಸ್ಥೈರ್ಯ । ವೇಗ ಮತ್ತು ನಿಖರತೆ ಗಳನ್ನು ಹೆಚ್ಚಿಸುತ್ತದೆ

Think Abacus
Join UCMAS

ಭಾರತದ 26 ರಾಜ್ಯಗಳಲ್ಲೂ ಯುಸಿಮಾಸ್ ತನ್ನ ಶಾಖೆಗಳನ್ನು ಹೊಂದಿದೆ
- 2400 ತರಬೇತಿ ಕೇಂದ್ರಗಳು
- 6000 ತರಬೇತಿ ಪಡೆದ ಬೋಧಕರು
- 600000 ವಿದ್ಯಾರ್ಥಿಗಳು

ಯುಸಿಮಾಸ್ (ಇಂಡಿಯಾ) ಪ್ರೈ. ಲಿ
UCMAS (INDIA) PVT. LTD.
Regional office : No.685, 11th Main, 2nd Block,
Rajaji Nagar, Bangalore - 560 010, Karnataka
Email : karnataka@ucmasindia.com Tel : 91-80-23328844
Regd. & Corporate Office : No. A1-1857, 13th Main Road,
Anna Nagar West, Chennai - 600 040. Tel: 91-44-2618 2396 (5 Lines)
Mob : 09444952532,Email : admin@ucmasindia.com
Website : www.ucmasindia.com , www.ucmasindianac.com

UCMAS MAKING ABACUS LEARNING
a COLOURFUL experience
Ask for the 4 Color Books and CBAG CD from Centre
ಯುಸಿಮಾಸ್ ಸದಸ್ಯತ್ವಕ್ಕೆ ಸಂಪರ್ಕಿಸಿ : 09449657662